INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-8, Issue -05,September-October, 2026
Page No,92-102
Peer -Reviewed, Refereed Journal

# ಕಲ್ಯಾಣ ಚಾಲುಕ್ಯರ ರಾಣಿ ಲಕುಮಾದೇವಿಯ ವ್ಯಕ್ತಿತ್ವ ಮತ್ತು ಸಾಧನೆಗಳು ಒಂದು ಅವಲೋಕನ

**ಡಾ. ಸಿ.ಈ.ಲೋಕೇಶ.**[1]

**ಸಾರಾಂಶ:** ಕಲ್ಯಾಣ ಚಾಲುಕ್ಯ ಸಾಮ್ರಾಜ್ಯವು ದಕ್ಷಿಣ ಭಾರತದ ಮಧ್ಯಕಾಲೀನ ಇತಿಹಾಸದಲ್ಲಿ ರಾಜಕೀಯ ಸ್ಥಿರತೆ, ಆಡಳಿತ ದಕ್ಷತೆ, ಸಾಂಸ್ಕೃತಿಕ ಪ್ರಗತಿ ಮತ್ತು ಧಾರ್ಮಿಕ ಸಹಿಷ್ಣುತೆಯ ಸಂಕೇತವಾಗಿದೆ. ಚಾಲುಕ್ಯರ ಆರನೆಯ ವಿಕ್ರಮಾದಿತ್ಯನ ಸುಮಾರು ಐವತ್ತು ವರ್ಷಗಳ ಆಳ್ವಿಕೆಯು ಈ ಸಾಮ್ರಾಜ್ಯದ ಸರ್ವೋತ್ತಮ ಕಾಲವಾಗಿ ಪರಿಗಣಿಸಲಾಗಿದೆ. ಈ ಅವಧಿಯಲ್ಲಿ; ಸಾಮ್ರಾಜ್ಯ ಭೌಗೋಳಿಕವಾಗಿ ವಿಸ್ತಾರ ಪಡೆದು ರಾಜಕೀಯ ಮತ್ತು ಆರ್ಥಿಕವಾಗಿ ದೃಢಪಟ್ಟಿತು. ಸಾಹಿತ್ಯ, ಶಿಲ್ಪಕಲೆ, ವಾಸ್ತುಶಿಲ್ಪ, ಧಾರ್ಮಿಕ ಚಿಂತನೆ ಮತ್ತು ಶಾಸನ ಸಂಪ್ರದಾಯಗಳಲ್ಲಿ ಅಪಾರ ಬೆಳವಣಿಗೆ ಕಂಡುಬಂತು. ವಿಕ್ರಮಾದಿತ್ಯನು ವಿಜಯಶಾಲಿ ರಾಜನಾಗಿ ಕಲೆ, ಸಾಹಿತ್ಯ ಹಾಗೂ ಧರ್ಮದ ಮಹಾನ್ ಪೋಷಕನಾಗಿಯೂ ಪ್ರಸಿದ್ಧನಾಗಿದ್ದನು. ರಾಜ್ಯದ ಅಭಿವೃದ್ಧಿಗೆ ರಾಜನ ಜೊತೆಗೆ ಮಂತ್ರಿಗಳು, ಸಾಮಂತರು ಮತ್ತು ಮಹಾರಾಣಿಯವರೂ ಕೂಡ ಮಹತ್ವದ ಕೊಡುಗೆಯನ್ನು ನೀಡಿದ್ದರು. ಅದರಲ್ಲಿಯೂ ರಾಣಿ ಲಕುಮಾದೇವಿ ಅಥವಾ ಲಕ್ಷ್ಮೀದೇವಿ ಎಂಬುವರು ಆಡಳಿತ, ಧಾರ್ಮಿಕ ಕಾರ್ಯಗಳು, ದಾನಧರ್ಮ ಮತ್ತು ಶಿಕ್ಷಣದಲ್ಲಿ ಸಕ್ರಿಯಪಾಲ್ಗೊಂಡಿದ್ದರು. ರಾಣಿ ಲಕುಮಾದೇವಿಯು ಆದರ್ಶ ಪತ್ನಿ, ಸಮರ್ಥ ಆಡಳಿತಗಾರ್ತಿ, ಧರ್ಮನಿಷ್ಠ ಶಿವಭಕ್ತೆ ಮತ್ತು ಜನಪರ ನಾಯಕಿಯಾಗಿ ಪ್ರಸಿದ್ಧಿ ಪಡೆದಳು. ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ, ಭೂದಾನ, ಅನ್ನದಾಸೋಹ, ಜ್ಞಾನದಾಸೋಹ, ಯಾತ್ರಿಕರಿಗೆ ಸಹಾಯ ಮತ್ತು ಶರಣರ ರಕ್ಷಣೆಯಂತಹ ಜನೋಪಕಾರಿ ಕಾರ್ಯಗಳಲ್ಲಿ ತೊಡಗಿದ್ದಳು. ಲಕುಮಾದೇವಿಯ ಕುರಿತು ವಿವಿಧ ಶಾಸನಗಳು ಮತ್ತು ಹರಿಹರನ ಹಾಗೂ ತೆಲುಗು ಜೊಮ್ಮಯ್ಯನ ರಗಳೆಗಳ ಸಾಹಿತ್ಯ ಕೃತಿಗಳು, ಧಾರ್ಮಿಕ ಭಕ್ತಿ, ರಾಜಕೀಯ ದೂರದೃಷ್ಟಿ ಮತ್ತು ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಹೆಚ್ಚಿನದಾಗಿಯೇ ತಿಳಿಸುತ್ತವೆ.

**ಪ್ರಧಾನ ಪದಗಳು: ಲಕುಮಾದೇವಿ, ಕಲ್ಯಾಣ ಚಾಲುಕ್ಯರು, ಆರನೇ ವಿಕ್ರಮಾದಿತ್ಯ, ಹರಿಹರ, ಶಿವಭಕ್ತಿ, ವೀರಶೈವ ಧರ್ಮ, ಶರಣರು, ಮಧ್ಯಕಾಲೀನ ಕರ್ನಾಟಕ.**

[1].ಪ್ರಾಧ್ಯಾಪಕರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ/ ಪುರಾತತ್ತ್ವಶಾಸ್ತ್ರ ಮತ್ತು ವಸ್ತುಸಂಗ್ರಹಾಲಯ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು

**ಪೀಠಿಕೆ:** ಮಧ್ಯಕಾಲೀನ ಕರ್ನಾಟಕದ ರಾಜಮನೆತನದ ಮಹಿಳೆಯರು ರಾಜಕೀಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ಸಾಮಾನ್ಯವಾಗಿ ಮಹಿಳೆಯರು ಅಂತಃಪುರಕ್ಕೆ ಸೀಮಿತನೆಂದು ತಿಳಿದಿದ್ದರೂ, ಪಶ್ಚಿಮ ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಅವರು ಆಡಳಿತ, ಧಾರ್ಮಿಕ ಚಟುವಟಿಕೆ, ದಾನಧರ್ಮ, ಶಿಕ್ಷಣ ಮತ್ತು ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳಲ್ಲಿ ಸಕ್ರಿಯರಿದ್ದರು. ಅದರಲ್ಲಿಯೂ ರಾಣಿ ಲಕುಮಾದೇವಿಯು ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯನ ಆಳ್ವಿಕೆಯ ಅವಧಿಯಲ್ಲಿ ರಾಜಕೀಯವಾಗಿ ಪ್ರಭಾವಶಾಲಿ, ಸಮರ್ಥ ಆಡಳಿತಗಾರ್ತಿ ಹಾಗೂ ಜನಪರ ನಾಯಕಿಯಾಗಿದ್ದರು. ಈಕೆಯು ಅಧಿಕೃತವಾಗಿ ಪಟ್ಟದರಾಣಿಯಲ್ಲದಿದ್ದರೂ, ರಾಜಸಭೆಯಲ್ಲಿ ಗೌರವಿತ ಮಹಿಳೆಯಾಗಿದ್ದಳು. ವಿವಿಧ ಪ್ರಾಂತ್ಯಗಳ ಆಡಳಿತ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿ ರಾಜ್ಯ ಸುಶಾಸನಕ್ಕೆ ಕೊಡುಗೆಯಾಗಿದೆ. ಧಾರ್ಮಿಕ ನಿಷ್ಠೆ ಮತ್ತು ಶಿವಭಕ್ತಿಯಲ್ಲಿ ಆಳವಾದ ವ್ಯಕ್ತಿತ್ವ, ಶಿವಶರಣರಿಗೆ ಆಶ್ರಯ, ಗೌರವ ಮತ್ತು ಆರ್ಥಿಕ ಬೆಂಬಲ, ಹರಿಹರನ ರಗಳೆಗಳು ಮತ್ತು ತೆಲುಗು ಜೊಮ್ಮಯ್ಯನ ಕೃತಿಗಳಲ್ಲಿ ಅವಳ ಭಕ್ತಿ ಮತ್ತು ಆಧ್ಯಾತ್ಮಿಕತೆ ಪ್ರತಿಬಿಂಬಿತವಾಗಿದೆ. ಈಕೆಯು ಜನೋಪಕಾರಿ ಸೇವೆಗಳಲ್ಲಿ ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ. ಭೂದಾನ, ಅನ್ನದಾಸೋಹ, ಜ್ಞಾನದಾಸೋಹ, ಯಾತ್ರಿಕರಿಗೆ ನೀರಿನ ವ್ಯವಸ್ಥೆ, ಧರ್ಮಶಾಲೆ ನಿರ್ಮಾಣ. ಬಡವರಿಗೆ ನೆರವು, ಧಾರ್ಮಿಕ ಪುಣ್ಯಸಂಪಾದನೆ ಮಾತ್ರವಲ್ಲದೆ, ಸಮಾಜದ ಕಲ್ಯಾಣ ಹಾಗೂ ಜೀವನಮಟ್ಟ ಸುಧಾರಣೆ ಉದ್ದೇಶವನ್ನು ಹೊಂದಿತ್ತು. ರಾಜಸತ್ತೆ ಮತ್ತು ಶಿವಶರಣರ ನಡುವೆ ಭಿನ್ನಾಭಿಪ್ರಾಯಗಳನ್ನು ಸಮನ್ವಯಗೊಳಿಸಿ ಧಾರ್ಮಿಕ ಸಾಮರಸ್ಯ ಕಾಪಾಡಿದಳು. ಆದರ್ಶ ನಾಯಕಿಯಾಗಿ ಆಡಳಿತ ಮತ್ತು ಧರ್ಮದ ಸಮತೋಲನ ಸಾಧನೆಯಾಗಿದೆ. ಇದರಿಂದ, ಮಧ್ಯಕಾಲೀನ ಕರ್ನಾಟಕದಲ್ಲಿ ರಾಜಮನೆತನದ ಮಹಿಳೆಯರು ಅದರಲ್ಲಿಯೂ ಈ ಲಕುಮಾದೇವಿಯು ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮಹತ್ವಪೂರ್ಣ ಮತ್ತು ಸಕ್ರಿಯ ಪಾತ್ರ ವಹಿಸಿದ್ದರು.

**ರಾಣಿ ಲಕುಮಾದೇವಿಯ ವ್ಯಕ್ತಿತ್ವ:** ರಾಣಿ ಲಕುಮಾದೇವಿ ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಇತಿಹಾಸದಲ್ಲಿ ಅತ್ಯಂತ ಪ್ರಭಾವಶಾಲಿ ಮತ್ತು ಧರ್ಮನಿಷ್ಠೆಳ್ಳಿದ ಮಹಿಳೆಯಾಗಿ ಗುರುತಿಸಿಕೊಂಡಿದ್ದಾಳೆ. ಶಾಸನಗಳು, ಸಾಹಿತ್ಯ ಮತ್ತು ಭಕ್ತಿಕಾವ್ಯಗಳು ಅವಳ ವ್ಯಕ್ತಿತ್ವವನ್ನು ಗೌರವದಿಂದ ಚಿತ್ರಿಸುತ್ತವೆ. ಅವಳಿಗೆ ಲಕ್ಷ್ಮೀದೇವಿ, ಲಕ್ಷ್ಮೀ ಮಹಾದೇವಿ, ಪ್ರಿಯರಸಿ ಲಕ್ಷ್ಮೀದೇವಿ ಎಂಬ ವಿವಿಧ ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಹರಿಹರನ ತೆಲುಗು ಜೊಮ್ಮಯ್ಯನ ರಗಳೆ ಲಕುಮಾದೇವಿಯ ಶಿವಭಕ್ತಿ, ಶಾಂತಸ್ವಭಾವ, ವಿನಯಶೀಲತೆ ಮತ್ತು ಆದರ್ಶ ಶಿವಭಕ್ತೆಯಾಗಿ ಅವಳನ್ನು ವರ್ಣಿಸುತ್ತದೆ. "ಪರಮಶಿವ ಲಿಂಗಾರ್ಚನಾನಿರತ ಗುಣಶಾಂತೆ" ಎಂಬ ಪದ್ಯವು ಅವಳ ಆಧ್ಯಾತ್ಮಿಕತೆಯ ವಿಶಿಷ್ಟತೆಯನ್ನು ಒಳಗೊಂಡಿದೆ.

ರಾಜಕೀಯ ಪ್ರಜ್ಞೆ, ಧಾರ್ಮಿಕ ನಿಷ್ಠೆ, ಸಾಮಾಜಿಕ ಹೊಣೆಗಾರಿಕೆ ಮತ್ತು ಮಾನವೀಯ ಮೌಲ್ಯಗಳ ಸಮನ್ವಯ. ವಿಕ್ರಮಾದಿತ್ಯನಿಗೆ ಸಲಹೆ ನೀಡುವ ಸಮರ್ಥ ಆಡಳಿತಗಾರ್ತಿ. ರಾಜ್ಯದ ವಿವಿಧ ಪ್ರಾಂತ್ಯಗಳ ಆಡಳಿತದ ಹೊಣೆಗಾರಿಕೆ ಯಶಸ್ವಿಯಾಗಿ ನಿರ್ವಹಣೆ. ಧಾರ್ಮಿಕ ಕ್ಷೇತ್ರದಲ್ಲಿ ದೇವಾಲಯ ನಿರ್ಮಾಣ, ಜೀರ್ಣೋದ್ಧಾರ, ಭೂದಾನ, ಅನ್ನದಾಸೋಹ, ಜ್ಞಾನದಾಸೋಹ ಮತ್ತು ಶರಣರ ಆಶ್ರಯದ ಮೂಲಕ ಸಮಾಜಸೇವೆ. ವೀರಶೈವ ಶರಣರ ಜೊತೆ ಗೌರವಯುತ ಸಂಬಂಧ. ರಾಜಕೀಯ ಅಧಿಕಾರ ಮತ್ತು ಧಾರ್ಮಿಕ ಮೌಲ್ಯಗಳ ನಡುವೆ ಸಮತೋಲನ ಸಾಧನೆ. ರಾಜ ಮತ್ತು ಶರಣರ ನಡುವೆ ಉಂಟಾಗಬಹುದಾದ ಭಿನ್ನಾಭಿಪ್ರಾಯಗಳನ್ನು ಸಮರ್ಥವಾಗಿ ನಿವಾರಣೆ. ಇತಿಹಾಸದಲ್ಲಿ ಸ್ಥಿತಿ; ತನ್ನ ಜೀವನ ಮೌಲ್ಯಗಳು, ಧಾರ್ಮಿಕ ನಿಷ್ಠೆ ಮತ್ತು ಜನಪರ ಆಡಳಿತದ ಮೂಲಕ ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಅಳಿಯದ ಹೆಜ್ಜೆಗುರುತನ್ನು ಮೂಡಿಸಿದಳು. ಮಹಿಳಾ ನಾಯಕತ್ವ, ಧಾರ್ಮಿಕ ಆದರ್ಶ, ನೈತಿಕ ಮೌಲ್ಯಗಳು ಮತ್ತು ಸಮಾಜಮುಖಿ ಆಡಳಿತದ ಪರಿಪೂರ್ಣತೆ. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಮಹಾರಾಣಿಯಾಗಿರುವುದರ ಜೊತೆಗೆ ಕರ್ನಾಟಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸದಲ್ಲಿ ಚಿರಸ್ಮರಣೀಯ ಮಹಿಳಾ ನಾಯಕಿ. ಇದರ ಮೂಲಕ ಲಕುಮಾದೇವಿಯು ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದ್ದಾಳೆ.

**ಆಡಳಿತದಲ್ಲಿ ಲಕುಮಾದೇವಿಯ ಪಾತ್ರ:** ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಇತಿಹಾಸದಲ್ಲಿ ರಾಣಿ ಲಕುಮಾದೇವಿಯು ಕೇವಲ ಅರಮನೆಗೆ ಸೀಮಿತವಾಗಿದೇ ಸಮರ್ಥ ಆಡಳಿತಗಾರ್ತಿಯಾಗಿ ಮಧ್ಯಕಾಲೀನ ಭಾರತದ ರಾಜಕೀಯ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ನೇರ ಆಡಳಿತದ ಜವಾಬ್ದಾರಿಯನ್ನು ವಹಿಸುವುದು ಅಪರೂಪದ ಸಂಗತಿಯಾಗಿದ್ದರೂ, ಲಕುಮಾದೇವಿಯು ತನ್ನ ರಾಜಕೀಯ ಪ್ರಜ್ಞೆ, ಆಡಳಿತದಕ್ಷತೆ ಮತ್ತು ದೂರದೃಷ್ಟಿಯಿಂದ ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಿದಳು. ಅವಳ ಆಡಳಿತ ಸಾಮರ್ಥ್ಯವು ಕಲ್ಯಾಣ ಚಾಲುಕ್ಯರ ಸುಸಂಘಟಿತ ಆಡಳಿತ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿದ ಮಹತ್ವದ ಅಂಶವಾಗಿದೆ. ಶಾಸನಾಧಾರಗಳ ಪ್ರಕಾರ, ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಐದನೇ ವರ್ಷವಾದ ಕ್ರಿ.ಶ. 1080 ರಿಂದಲೇ ಇದೇ ಲಕುಮಾದೇವಿಯು ಆಡಳಿತದ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದಳು. ಕ್ರಿ.ಶ 1080ರ ಡೋಣಿ ಶಾಸನವು ಅವಳು ಸ್ವತಂತ್ರ ಆಡಳಿತದ ಅಧಿಕಾರವನ್ನು ಪಡೆದಿದ್ದಾಳೆ ಎಂಬುದನ್ನು ಸೂಚಿಸುತ್ತದೆ. ಅನಂತರ ಕ್ರಿ.ಶ. 1084ರಲ್ಲಿ ಕಲ್ಯಾಣ, ಕ್ರಿ.ಶ. 1095–96ರಲ್ಲಿ ಡಂಬಳ ಹಾಗೂ ಹದಿನೆಂಟು ಅಗ್ರಹಾರಗಳು ಮತ್ತು ಕ್ರಿ.ಶ. 1110–11ರಲ್ಲಿ ನಿಡಸಿಂಗಿ ಪ್ರದೇಶಗಳ ಆಡಳಿತವನ್ನು ಅವಳು ನಿರ್ವಹಿಸಿದ್ದಾಳೆ ಎಂಬುದಕ್ಕೆ ಶಾಸನಗಳು ಸಾಕ್ಷ್ಯಗಳನ್ನು ಒದಗಿಸುತ್ತವೆ. ಸುಮಾರು ಮೂವತ್ತು ವರ್ಷಗಳಿಗೂ ಹೆಚ್ಚು ಕಾಲ ವಿವಿಧ ಪ್ರಾಂತ್ಯಗಳ ಆಡಳಿತವನ್ನು ಸಮರ್ಥವಾಗಿ ನಡೆಸಿದ ಅವಳ ಕಾರ್ಯದಕ್ಷತೆ ಮಧ್ಯಕಾಲೀನ ಮಹಿಳಾ ನಾಯಕತ್ವದ ಅಪೂರ್ವ ಉದಾಹರಣೆಯಾಗಿದೆ.

ಲಕುಮಾದೇವಿಯ ಜನಪರ ಆಡಳಿತವು ರಾಜ್ಯದಲ್ಲಿ ಕೇವಲ ತೆರಿಗೆ ಸಂಗ್ರಹಣೆ ಮತ್ತು ಕಾನೂನು–ಸುವ್ಯವಸ್ಥೆಗೆ ಸೀಮಿತಗೊಳಿಸದೆ, ಪ್ರಜೆಗಳ ಜೀವನಮಟ್ಟವನ್ನು ಸುಧಾರಿಸುವ ದೃಷ್ಟಿಯಿಂದಲೂ ಕಾರ್ಯನಿರ್ವಹಿಸಿದಳು. ನೀರಾವರಿ, ಯಾತ್ರಿಕರ ಅನುಕೂಲಕ್ಕಾಗಿ ಅರವಟ್ಟಿಗೆಗಳ ನಿರ್ಮಾಣ, ಧರ್ಮಶಾಲೆಗಳ ಸ್ಥಾಪನೆ, ಅನ್ನದಾಸೋಹ ಮತ್ತು ಬಡವರಿಗೆ ನೆರವು ನೀಡುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತಂದು, ಆಡಳಿತವನ್ನು ಜನಕಲ್ಯಾಣದ ಸಾಧನವಾಗಿಸಿದಳು. ಅವಳ ಆಡಳಿತದಲ್ಲಿ ಪ್ರಜೆಗಳ ಹಿತಾಸಕ್ತಿಯೇ ಪ್ರಮುಖ ಆದ್ಯತೆಯಾಗಿತ್ತು. ಹಾಗೆಯೇ ಧಾರ್ಮಿಕ ಸಹಿಷ್ಣುತೆ ಮತ್ತು ಧಾರ್ಮಿಕ ಪೋಷಣೆಯಾಗಿ; ಶಿವಭಕ್ತೆಯಾಗಿದ್ದರೂ, ಧಾರ್ಮಿಕ ಸಂಸ್ಥೆಗಳನ್ನು ಸಮಾಜದ ಅಭಿವೃದ್ಧಿಯ ಕೇಂದ್ರಗಳಾಗಿ ರೂಪಿಸುವ ದೃಷ್ಟಿಕೋನವನ್ನು ಹೊಂದಿದ್ದಳು. ಶಿವ ದೇವಾಲಯಗಳ ನಿರ್ಮಾಣ, ಜೀರ್ಣೋದ್ಧಾರ ಹಾಗೂ ನಿತ್ಯಪೂಜೆಗೆ ಭೂದಾನಗಳನ್ನು ನೀಡಿದಳು. ದೇವಾಲಯಗಳಲ್ಲಿ ಅನ್ನದಾಸೋಹ ಮತ್ತು ಜ್ಞಾನದಾಸೋಹ ನಿರಂತರವಾಗಿ ನಡೆಯುವಂತೆ ದತ್ತಿಗಳನ್ನು ನೀಡುವ ಮೂಲಕ ದೇವಾಲಯಗಳನ್ನು ಕೇವಲ ಪೂಜಾಸ್ಥಳಗಳಾಗಿ ಅಲ್ಲದೆ, ಶಿಕ್ಷಣ, ದಾನಧರ್ಮ ಮತ್ತು ಸಾಮಾಜಿಕ ಸೇವೆಯ ಕೇಂದ್ರಗಳಾಗಿ ಬೆಳೆಸಿದಳು. ಈ ಮೂಲಕ ಅವಳ ಆಡಳಿತವು ಧರ್ಮ ಮತ್ತು ಸಮಾಜಸೇವೆಯ ಸಮನ್ವಯಕ್ಕೆ ಉತ್ತಮ ನಿದರ್ಶವಾಗಿದೆ. ಲಕುಮಾದೇವಿಯು ದೇವಾಲಯಗಳು, ಮಠಗಳು ಹಾಗೂ ಧಾರ್ಮಿಕ ಸಂಸ್ಥೆಗಳಿಗೆ ಕೃಷಿಭೂಮಿಗಳನ್ನು, ಆದಾಯದ ಮೂಲಗಳನ್ನು ಹಾಗೂ ಇತರ ಆಸ್ತಿಗಳನ್ನು ದಾನವಾಗಿ ನೀಡಿದ್ದಾಳೆ ಎಂಬ ಉಲ್ಲೇಖಗಳು ಕೆಲವು ಶಾಸನಗಳಲ್ಲಿ ದೊರೆಯುತ್ತವೆ. ಇಂತಹ ದತ್ತಿಗಳು ಧಾರ್ಮಿಕ ಸಂಸ್ಥೆಗಳ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದರ ಜೊತೆಗೆ ಶಿಕ್ಷಣ, ಅನ್ನದಾನ ಮತ್ತು ಸಮಾಜಸೇವಾ ಚಟುವಟಿಕೆಗಳನ್ನು ನಿರಂತರವಾಗಿ ನಡೆಸಲು ಸಹಕಾರಿಯಾಗಿದ್ದವು. ಅವಳ ಉದಾರ ದಾನಶೀಲತೆಯನ್ನು ಮೆಚ್ಚಿ ಡೋಣಿ ಶಾಸನವು ಅವಳನ್ನು "ಮಹಾದಾನ ವಿನೋದೆ" ಮತ್ತು "ದಾನಚಿಂತಾಮಣಿ" ಎಂಬ ಬಿರುದುಗಳಿಂದ ಗೌರವಿಸಿದೆ. ಲಕುಮಾದೇವಿಯ ಆಡಳಿತದಲ್ಲಿ ಸ್ಥಳೀಯ ಆಡಳಿತ ವ್ಯವಸ್ಥೆಗೆ ವಿಶೇಷ ಪ್ರೋತ್ಸಾಹಿಸುವ ಮೂಲಕ ಅಗ್ರಹಾರಗಳು, ಗ್ರಾಮಗಳು ಹಾಗೂ ದೇವಾಲಯಗಳ ಆಡಳಿತದಲ್ಲಿ ಸ್ಥಳೀಯ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ನೀಡಿ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಹೆಚ್ಚು ಬಲಪಡಿಸಿದಳು. ಗ್ರಾಮೀಣ ಸಂಸ್ಥೆಗಳು ಮತ್ತು ಧಾರ್ಮಿಕ ಸಂಸ್ಥೆಗಳು ಸ್ವಾವಲಂಬಿಯಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಆರ್ಥಿಕ ಹಾಗೂ ಆಡಳಿತಾತ್ಮಕ ಬೆಂಬಲವನ್ನು ಒದಗಿಸಿದಳು. ಇದರಿಂದ ಆಡಳಿತವು ಜನರಿಗೆ ಹತ್ತಿರವಾಗುವಂತಾಯಿತು ಮತ್ತು ಸ್ಥಳೀಯ ಅಭಿವೃದ್ಧಿಗೆ ಉತ್ತೇಜನ ದೊರೆಯಿತು. ರಾಜಕೀಯ ಅಧಿಕಾರವನ್ನು ವೈಯಕ್ತಿಕ ವೈಭವಕ್ಕಾಗಿ ಬಳಸದೆ, ನ್ಯಾಯಯುತ ಆಡಳಿತ, ಧರ್ಮನಿಷ್ಠೆ ಮತ್ತು ಪ್ರಜೆಗಳ ಕಲ್ಯಾಣವನ್ನು ಅವಳು ತನ್ನ ಆಡಳಿತದ ಆಧಾರವನ್ನಾಗಿಸಿಕೊಂಡಿದ್ದಳು. ಶರಣರು, ಧಾರ್ಮಿಕ ಮುಖಂಡರು ಹಾಗೂ ಸಾಮಾನ್ಯ ಪ್ರಜೆಗಳೊಂದಿಗೆ

ಸಮಾನ ಗೌರವದಿಂದ ನಡೆದುಕೊಳ್ಳುತ್ತಿದ್ದಳು. ರಾಜ ಮತ್ತು ಶರಣರ ನಡುವೆ ಉಂಟಾಗಬಹುದಾದ ಭಿನ್ನಾಭಿಪ್ರಾಯಗಳನ್ನು ವಿವೇಕದಿಂದ ಪರಿಹರಿಸಿ ಸಾಮಾಜಿಕ ಸಾಮರಸ್ಯವನ್ನು ಕಾಪಾಡಿದಳು. ಅವಳ ಆಡಳಿತದಲ್ಲಿ ನ್ಯಾಯ, ಧರ್ಮ ಮತ್ತು ಜನಹಿತ ಎಂಬ ಮೂರು ತತ್ವಗಳು ಸಮಾನ ಪ್ರಾಮುಖ್ಯತೆಯನ್ನು ಪಡೆದಿದ್ದವು. ಸೂಡಿ ಶಾಸನವು ಲಕುಮಾದೇವಿಯನ್ನು "ಭೂಮಿಯಲ್ಲಿ ಅವತರಿಸಿದ ಪುಣ್ಯದೇವತೆ" ಎಂದು ಕೊಂಡಾಡಿರುವುದು ಅವಳ ಜನಪ್ರಿಯತೆ, ಆಡಳಿತದಕ್ಷತೆ ಮತ್ತು ಧರ್ಮನಿಷ್ಠೆಗೆ ದೊರೆತ ಉನ್ನತ ಗೌರವವಾಗಿದೆ. ಈ ಪ್ರಶಂಸೆ ಅವಳು ಕೇವಲ ರಾಜಮನೆತನದ ಸದಸ್ಯೆಯಾಗಿರದೆ, ಜನರ ಹೃದಯದಲ್ಲಿ ಸ್ಥಾನ ಪಡೆದ ಆಡಳಿತಗಾರ್ತಿಯಾಗಿದ್ದಾಳೆ ಎಂಬುದನ್ನು ಸೂಚಿಸುತ್ತದೆ.

**ಶಿವಭಕ್ತಿ ಮತ್ತು ವೀರಶೈವ ಧರ್ಮ:** ಲಕುಮಾದೇವಿಯು ಅಚಲವಾದ ಶಿವಭಕ್ತೆ. ಅವಳ ಜೀವನದಲ್ಲಿ ರಾಜಕೀಯ ಅಧಿಕಾರ, ರಾಜವೈಭವ ಮತ್ತು ಅಂತಃಪುರದ ಸುಖಸೌಲಭ್ಯಗಳಿಗಿಂತಲೂ ಪರಮಶಿವನ ಮೇಲಿನ ಭಕ್ತಿ, ಶರಣರ ಸೇವೆ ಹಾಗೂ ಧಾರ್ಮಿಕ ಮೌಲ್ಯಗಳ ಪಾಲನೆಯೇ ಹೆಚ್ಚಿನ ಸ್ಥಾನವನ್ನು ಪಡೆದಿದ್ದವು. ಅವಳು ತನ್ನ ದಾಂಪತ್ಯ ಜೀವನವನ್ನು ಕೇವಲ ರಾಜಮನೆತನದ ಕರ್ತವ್ಯಗಳಿಗೆ ಅಥವಾ ಐಹಿಕ ಸುಖಭೋಗಗಳಿಗೆ ಸೀಮಿತಗೊಳಿಸದೆ, ಆಧ್ಯಾತ್ಮಿಕ ಸಾಧನೆ ಮತ್ತು ಸಮಾಜಸೇವೆಯೊಂದಿಗೆ ಸಮನ್ವಯಗೊಳಿಸಿದಳು. ಶಿವಲಿಂಗಾರಾಧನೆ, ಶಿವಸ್ಮರಣೆ, ಶಿವಶರಣರ ಸೇವೆ ಹಾಗೂ ದಾನಧರ್ಮವನ್ನು ತನ್ನ ಜೀವನದ ಪರಮ ಧ್ಯೇಯವನ್ನಾಗಿ ಸ್ವೀಕರಿಸಿ, ಅವುಗಳನ್ನು ತನ್ನ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಂಡಿದ್ದಳು. ಹರಿಹರನ ರಗಳೆಗಳು ಅವಳ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸುತ್ತವೆ. ಹರಿಹರನು ಅವಳ ಬಾಹ್ಯ ಸೌಂದರ್ಯವನ್ನು ವರ್ಣಿಸುವುದಕ್ಕಿಂತ ಅವಳ ಅಂತರಂಗದ ಪಾವಿತ್ರ್ಯ, ಭಕ್ತಿ ಮತ್ತು ಶರಣಸೇವೆಯನ್ನು ಹೆಚ್ಚು ಮಹತ್ವದಿಂದ ನಿರೂಪಿಸುತ್ತಾನೆ. ಅವನ ದೃಷ್ಟಿಯಲ್ಲಿ ಲಕುಮಾದೇವಿಯ ನಿಜವಾದ ಸೌಂದರ್ಯವು ಅವಳ ಭಕ್ತಿ, ವಿನಯ, ದಯೆ ಮತ್ತು ಧರ್ಮನಿಷ್ಠೆಯಲ್ಲಿತ್ತು. ಮಧ್ಯಕಾಲೀನ ಕನ್ನಡ ಕಾವ್ಯಗಳಲ್ಲಿ ಲಕುಮಾದೇವಿಯನ್ನು ಅನೇಕ ಗೌರವಪೂರ್ಣ ವಿಶೇಷಣಗಳಿಂದ ಕೊಂಡಾಡಲಾಗಿದೆ. "ಶಿವಲಿಂಗ ಸಂಪನ್ನೆ", "ಜಂಗಮ ಸ್ನೇಹಿ", "ಸತ್ಯಭಕ್ತೆ" ಹಾಗೂ "ಶಿವಲಿಂಗಾರ್ಚನಾನಿರತೆ" ಎಂಬ ವಿಶೇಷಣಗಳಾಗಿವೆ. "ಶಿವಲಿಂಗ ಸಂಪನ್ನೆ" ಎಂಬುದು ಅವಳು ಶಿವಲಿಂಗವನ್ನು ಜೀವನದ ಪರಮ ಆರಾಧ್ಯವಸ್ತುವಾಗಿ ಸ್ವೀಕರಿಸಿದ್ದಾಳೆ ಎಂಬುದನ್ನು ಸೂಚಿಸಿದರೆ, "ಜಂಗಮ ಸ್ನೇಹಿ" ಎಂಬುದು ಶಿವಶರಣರು ಮತ್ತು ಜಂಗಮರ ಮೇಲಿನ ಅವಳ ಅಪಾರ ಗೌರವ ಹಾಗೂ ಆತ್ಮೀಯತೆಯನ್ನು ಪ್ರತಿಬಿಂಬಿಸುತ್ತದೆ. "ಸತ್ಯಭಕ್ತೆ" ಎಂಬ ವಿಶೇಷಣವು ಅವಳ ನಿಷ್ಕಪಟ ಹಾಗೂ ಅಚಲವಾದ ಭಕ್ತಿಯನ್ನು ಸೂಚಿಸುತ್ತದೆ. "ಶಿವಲಿಂಗಾರ್ಚನಾನಿರತೆ" ಎಂಬ ಬಿರುದು ಅವಳು ನಿರಂತರ ಶಿವಲಿಂಗ ಪೂಜೆಯಲ್ಲಿ ನಿರತನಾಗಿದ್ದಳು

ಎಂಬುದನ್ನು ತಿಳಿಸುತ್ತದೆ. ಹೀಗೆ, ಕೊಂಡುಗುಳಿ ಕೇಶಿರಾಜ, ತೆಲುಗು ಜೊಮ್ಮಯ್ಯ ಮತ್ತು ಬಾಹೂರ ಬೊಮ್ಮಯ್ಯ ಅವರಂತಹ ಶಿವಶರಣರ ಸಂಪರ್ಕವು ಅವಳ ಜೀವನದ ದಿಕ್ಕನ್ನೇ ಬದಲಿಸಿತು.

**ಶರಣರ ಸಂರಕ್ಷಕಿ:** ಲಕುಮಾದೇವಿಯು ಶಿವಶರಣರ ಮೇಲಿನ ಅಪಾರ ಗೌರವ, ಭಕ್ತಿ ಮತ್ತು ಆಶ್ರಯದಾತೃತ್ವ. ವೀರಶೈವ ಧರ್ಮದ ತತ್ವಗಳಿಂದ ಆಳವಾಗಿ ಪ್ರೇರಿತಳಾಗಿದ್ದ ಲಕುಮಾದೇವಿಯು ಶರಣರನ್ನು ಕೇವಲ ಧಾರ್ಮಿಕ ಉಪದೇಶಕರಾಗಿ ಅಥವಾ ದೇವಾಲಯಗಳ ಪೂಜಾರಿಗಳಾಗಿ ಪರಿಗಣಿಸಲಿಲ್ಲ. ಅವಳ ದೃಷ್ಟಿಯಲ್ಲಿ ಶರಣರು ಸಮಾಜದ ನೈತಿಕ ಮೌಲ್ಯಗಳನ್ನು ಉಳಿಸುವವರು, ಧರ್ಮದ ಜೀವಂತ ಪ್ರತೀಕಗಳು, ಮಾನವೀಯತೆಯ ಪ್ರತಿಪಾದಕರು ಹಾಗೂ ಸತ್ಯ ಮತ್ತು ಸಮಾನತೆಯ ಮಾರ್ಗದರ್ಶಕರಾಗಿದ್ದರು. ಆದ್ದರಿಂದ ಅವಳು ಅವರಿಗೆ ರಾಜಮನೆತನದ ಗೌರವವನ್ನು ನೀಡುವುದರ ಜೊತೆಗೆ, ಅವರ ಜೀವನೋಪಾಯ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಅಗತ್ಯವಾದ ಎಲ್ಲ ರೀತಿಯ ಸಹಕಾರವನ್ನು ಒದಗಿಸುತ್ತಿದ್ದಳು. ವೀರಶೈವ ಶರಣರು ಸಮಾಜದಲ್ಲಿ ಸಮಾನತೆ, ಕಾಯಕ, ದಾಸೋಹ, ಸತ್ಯ ಮತ್ತು ಭಕ್ತಿಯ ತತ್ವಗಳನ್ನು ಬೋಧಿಸುತ್ತಿದ್ದರು. ಇಂತಹ ಆದರ್ಶಮಯ ಜೀವನವನ್ನು ನಡೆಸುತ್ತಿದ್ದ ಶರಣರನ್ನು ಲಕುಮಾದೇವಿಯು ಸಮಾಜದ ನೈತಿಕ ಶಕ್ತಿಯೆಂದು ಪರಿಗಣಿಸಿದ್ದಳು. ರಾಜಕೀಯ ಅಧಿಕಾರವು ಧರ್ಮ ಮತ್ತು ಸಮಾಜದ ಹಿತಕ್ಕಾಗಿ ಬಳಕೆಯಾಗಬೇಕು ಎಂಬ ನಂಬಿಕೆಯನ್ನು ಹೊಂದಿದ್ದ ಅವಳು, ಶರಣರ ಸೇವೆಯನ್ನು ತನ್ನ ರಾಜಧರ್ಮದ ಒಂದು ಭಾಗವನ್ನಾಗಿಸಿಕೊಂಡಳು. ಇದರ ಪರಿಣಾಮವಾಗಿ ರಾಜಸಭೆ ಮತ್ತು ಶರಣ ಸಮುದಾಯದ ನಡುವೆ ಪರಸ್ಪರ ಗೌರವ ಮತ್ತು ವಿಶ್ವಾಸದ ಸಂಬಂಧ ಬೆಳೆಯಿತು. ಲಕುಮಾದೇವಿಯು ಗೌರವದಿಂದ ಕಾಣುತ್ತಿದ್ದ ಶಿವಶರಣರಲ್ಲಿ ತೆಲುಗು ಜೊಮ್ಮಯ್ಯ ಪ್ರಮುಖನಾಗಿದ್ದನು. ಹರಿಹರನ ತೆಲುಗು ಜೊಮ್ಮಯ್ಯನ ರಗಳೆಯಲ್ಲಿ ಇವರಿಬ್ಬರ ನಡುವಿನ ಭಕ್ತಿ ಮತ್ತು ಗೌರವದ ಸಂಬಂಧವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಲಾಗಿದೆ. ಜೊಮ್ಮಯ್ಯನ ನಿಷ್ಕಪಟ ಶಿವಭಕ್ತಿ, ವೈರಾಗ್ಯ ಮತ್ತು ಆಧ್ಯಾತ್ಮಿಕ ಜೀವನವನ್ನು ಕಂಡು ಮೆಚ್ಚಿದ ಲಕುಮಾದೇವಿಯು ಅವನನ್ನು ಸಾಮಾನ್ಯ ಜಂಗಮನಾಗಿ ಕಾಣದೆ, ಶಿವಸ್ವರೂಪನಾಗಿಯೇ ಗೌರವಿಸುತ್ತಿದ್ದಳು. ಹರಿಹರನ ಉಲ್ಲೇಖದ ಪ್ರಕಾರ, ಲಕುಮಾದೇವಿಯು ಪ್ರತಿದಿನವೂ ಜೊಮ್ಮಯ್ಯನ ಶಿವಪೂಜೆಗೆ ಅಗತ್ಯವಾದ ಹೊಸಹೊಸ ವಸ್ತ್ರಗಳು, ಚಂದನ, ಕರ್ಪೂರ, ಧೂಪ, ಕಸ್ತೂರಿ ಇತರ ಸಾಮಾಗ್ರಿಗಳನ್ನು ಭಕ್ತಿಭಾವದಿಂದ ಕಳುಹಿಸುತ್ತಿದ್ದಳು. ಹರಿಹರನು ಈ ಸಂದರ್ಭವನ್ನು "ಹೊಸಹೊಸ ಪರಿಯ ವಸ್ತ್ರ ಸಂತತಿಗಳಂ ಚಂದನಂ ಕರ್ಪೂರವಗಿಲು ಧೂಪಂಗಳಂ ಮಂದೈಸಿ ಕಂಪಿಡುವ ಸಾದು ಕಸ್ತೂರಿಗಳಂ ಅಂದಂದು ಬಂದೆಸೆವ ಪೊಚ್ಚಪೊಸ ಪೊಗಳಂ" ಎಂದು ವರ್ಣಿಸಿರುತ್ತಾನೆ. ಈ ಕಾವ್ಯಪಂಕ್ತಿಗಳು ಲಕುಮಾದೇವಿಯು ಶರಣರ ಮೇಲಿಟ್ಟಿದ್ದ ಗೌರವ ಮತ್ತು ಅವಳ ನಿಷ್ಕಪಟ ಭಕ್ತಿಯನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತವೆ. ಅವಳು ಕಳುಹಿಸುತ್ತಿದ್ದ ಕಾಣಿಕೆಗಳು ರಾಜಮನೆತನದ ಔಪಚಾರಿಕ ಉಡುಗೊರೆಗಳು ಮತ್ತು ಅವುಗಳು

ಪರಮಶಿವನಿಗೆ ಸಲ್ಲಿಸುವ ಸೇವೆಯೆಂಬ ಭಾವನೆಯಿಂದ ಅರ್ಪಿಸಲ್ಪಟ್ಟ ಭಕ್ತಿಯ ಸಂಕೇತಗಳಾಗಿದ್ದವು. ಹರಿಹರನ ಪ್ರಕಾರ, ಜೊಮ್ಮಯ್ಯನು ಅವಳ ಈ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದದ್ದು ಅವುಗಳಲ್ಲಿ ಆಡಂಬರ ಅಥವಾ ಅಹಂಕಾರವಿಲ್ಲದೆ ನಿಷ್ಕಪಟ ಭಕ್ತಿಯಾಗಿತ್ತು. ಇದು ಕೇವಲ ರಾಜಕೀಯ ಪ್ರತಿಷ್ಠೆಗಾಗಿ ಅಥವಾ ದರ್ಪದಿಂದ ನೀಡಿದ ದಾನವನ್ನು ಶರಣರು ಎಂದಿಗೂ ಸ್ವೀಕರಿಸುವವರಲ್ಲ ಎಂಬ ಸಂದೇಶವೂ ಈ ಘಟನೆಯಿಂದ ವ್ಯಕ್ತವಾಗುತ್ತದೆ. ಲಕುಮಾದೇವಿಯ ಶರಣಭಕ್ತಿಯು ಕೇವಲ ಭೌತಿಕ ಸಹಾಯಕ್ಕೆ ಸೀಮಿತವಾಗಿರಲಿಲ್ಲ. ಶರಣರ ಗೌರವಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು, ಅವರ ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡುವುದು ಹಾಗೂ ಸಮಾಜದಲ್ಲಿ ಅವರಿಗೆ ಯೋಗ್ಯ ಸ್ಥಾನಮಾನ ದೊರಕುವಂತೆ ಮಾಡುವುದು ಅವಳ ಕರ್ತವ್ಯವಾಗಿತ್ತು. ಲಕುಮಾದೇವಿಯ ಶರಣಸೇವೆ ವೀರಶೈವ ಧರ್ಮದ "ದಾಸೋಹ" ತತ್ವದ ಜೀವಂತ ಅಭಿವ್ಯಕ್ತಿಯಾಗಿತ್ತು. ಶರಣರಿಗೆ ನೀಡಿದ ಸೇವೆಯನ್ನು ಅವಳು ದಾನವೆಂದು ಪರಿಗಣಿಸಲಿಲ್ಲ; ಅದು ಶಿವನಿಗೆ ಸಲ್ಲಿಸಿದ ಸೇವೆಯೇ ಎಂಬ ಭಾವದಿಂದ ನಿರ್ವಹಿಸಿದಳು. ಶರಣರ ಸೇವೆಯ ಮೂಲಕ ಸಮಾಜದಲ್ಲಿ ಧರ್ಮ, ಸಮಾನತೆ ಮತ್ತು ಮಾನವೀಯ ಮೌಲ್ಯಗಳು ಬೆಳೆಯುತ್ತವೆ ಎಂಬ ದೃಢ ನಂಬಿಕೆ ಅವಳಲ್ಲಿತ್ತು. ಆದ್ದರಿಂದ ಶರಣರನ್ನು ಆಶ್ರಯಿಸುವುದು, ಅವರಿಗೆ ಅಗತ್ಯವಾದ ಸೌಲಭ್ಯಗಳನ್ನು ಒದಗಿಸುವುದು ಮತ್ತು ಅವರ ಮೂಲಕ ಸಮಾಜದಲ್ಲಿ ನೈತಿಕ ಮೌಲ್ಯಗಳನ್ನು ಬಲಪಡಿಸುವುದು ಅವಳ ಜೀವನದ ಪ್ರಮುಖ ಧ್ಯೇಯವಾಗಿತ್ತು.

**ರಾಜಕೀಯ ದೂರದೃಷ್ಟಿ:** ಹರಿಹರನ ರಗಳೆಯಲ್ಲಿ ಬರುವ ಜೊಮ್ಮಯ್ಯನ ಪ್ರಸಂಗವು ಲಕುಮಾದೇವಿಯ ರಾಜತಾಂತ್ರಿಕತೆ ಹಾಗೂ ವಿವೇಕವನ್ನು ಪ್ರತಿಬಿಂಬಿಸುತ್ತದೆ. ಶಿವನಿಂದೆಯ ಘಟನೆಗೆ ಸಂಬಂಧಿಸಿದಂತೆ; ರಾಜ ಮತ್ತು ಶರಣರ ನಡುವೆ ಸಂಘರ್ಷ ಉಂಟಾಗದಂತೆ ನೋಡಿಕೊಂಡಳು. ರಾಜನ ಕೋಪವನ್ನು ಶಮನಗೊಳಿಸಿದಳು. ಶರಣರ ಗೌರವವನ್ನು ಉಳಿಸಿದಳು. ರಾಜ್ಯದಲ್ಲಿ ಧಾರ್ಮಿಕ ಸಾಮರಸ್ಯವನ್ನು ಕಾಪಾಡಿದಳು. ಇದರಿಂದ ಅವಳು ಉತ್ತಮ ರಾಜತಾಂತ್ರಿಕ ನಾಯಕಿಯಾಗಿದ್ದಳು ಎಂಬುದು ಸ್ಪಷ್ಟವಾಗುತ್ತದೆ.

**ಲಕುಮಾದೇವಿಯ ಜನೋಪಕಾರಿ ಕಾರ್ಯಗಳು:** ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ರಾಣಿ ಲಕುಮಾದೇವಿಯ ವ್ಯಕ್ತಿತ್ವದ ಅತ್ಯಂತ ಉಜ್ವಲ ಅಂಶವೆಂದರೆ; ಅವಳ ಜನೋಪಕಾರಿ ಮನೋಭಾವ ಮತ್ತು ಸಮಾಜಮುಖಿ ಕಾರ್ಯಚಟುವಟಿಕೆಗಳು. ಮಧ್ಯಕಾಲೀನ ಭಾರತದ ರಾಜಮನೆತನದ ಮಹಿಳೆಯರಲ್ಲಿ ಅನೇಕರು ಧಾರ್ಮಿಕ ಕಾರ್ಯಗಳಿಗೆ ಕೊಡುಗೆ ನೀಡಿದ್ದರೂ, ಲಕುಮಾದೇವಿಯ ಜನಸೇವೆಯ ವ್ಯಾಪ್ತಿ ಅದಕ್ಕಿಂತಲೂ ವಿಶಾಲವಾಗಿತ್ತು. ಅವಳು ಧರ್ಮವನ್ನು ಕೇವಲ ವೈಯಕ್ತಿಕ ಆಚರಣೆಯಾಗಿ ಪರಿಗಣಿಸದೆ, ಜನರ ಕಲ್ಯಾಣ ಮತ್ತು ಸಾಮಾಜಿಕ ಅಭಿವೃದ್ಧಿಯ ಸಾಧನವೆಂದು ಕಂಡಳು. ಆದ್ದರಿಂದ ಅವಳ ಎಲ್ಲಾ ಧಾರ್ಮಿಕ ಕಾರ್ಯಗಳು ಜನೋಪಯೋಗಿ ಉದ್ದೇಶಗಳನ್ನು

ಒಳಗೊಂಡಿದ್ದವು. ಲಕುಮಾದೇವಿಯು ತನ್ನ ದಾನಶೀಲತೆ ಮತ್ತು ಉದಾರತೆಯ ಮೂಲಕ ಸಮಾಜದ ವಿವಿಧ ವರ್ಗಗಳ ಜನರಿಗೆ ನೆರವಾಗುವ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಳು. ಅವಳ ಆಶ್ರಯದಲ್ಲಿ ಅನೇಕ ಶಿವದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ ನಡೆದಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಅವಳ ದೃಷ್ಟಿಯಲ್ಲಿ ದೇವಾಲಯಗಳು ಕೇವಲ ಪೂಜಾ ಕೇಂದ್ರಗಳಾಗಿರದೆ, ಶಿಕ್ಷಣ, ಸಾಂಸ್ಕೃತಿಕ, ದಾನಧರ್ಮ ಹಾಗೂ ಸಾಮಾಜಿಕ ಸೇವೆಯ ಕೇಂದ್ರಗಳಾಗಿದ್ದವು. ಆದ್ದರಿಂದ ದೇವಾಲಯಗಳಲ್ಲಿ ನಿತ್ಯಪೂಜೆ, ದೀಪಾರಾಧನೆ, ಉತ್ಸವಗಳು ಹಾಗೂ ಅನ್ನದಾಸೋಹ ನಿರಂತರವಾಗಿ ನಡೆಯುವಂತೆ ಭೂಮಿ, ಆದಾಯದ ಮೂಲಗಳು ಮತ್ತು ಇತರ ದತ್ತಿಗಳನ್ನು ನೀಡುತ್ತಿದ್ದಳು. ಭೂದಾನ ಮತ್ತು ದತ್ತಿಗಳ ವ್ಯವಸ್ಥೆ ಲಕುಮಾದೇವಿಯ ಜನೋಪಕಾರಿ ಕಾರ್ಯಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆದಿತ್ತು. ದೇವಾಲಯಗಳು, ಮಠಗಳು, ಬ್ರಾಹ್ಮಣರು ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಕೃಷಿಭೂಮಿಗಳು, ತೋಟಗಳು ಮತ್ತು ಆದಾಯ ತರುವ ಆಸ್ತಿಗಳನ್ನು ದಾನವಾಗಿ ನೀಡುವುದರ ಮೂಲಕ ಅವುಗಳ ಆರ್ಥಿಕ ಸ್ಥಿರತೆಯನ್ನು ಕಾಪಾಡಿದಳು. ಈ ದತ್ತಿಗಳಿಂದ ಧಾರ್ಮಿಕ ಚಟುವಟಿಕೆಗಳು ಮಾತ್ರವಲ್ಲದೆ, ಶಿಕ್ಷಣ, ಅನ್ನದಾನ ಮತ್ತು ಸಮಾಜಸೇವೆಯ ಕಾರ್ಯಗಳೂ ನಿರಂತರವಾಗಿ ನಡೆಯುತ್ತಿದ್ದವು. ಲಕುಮಾದೇವಿಯು ಅನ್ನದಾಸೋಹ ಮತ್ತು ಜ್ಞಾನದಾಸೋಹಕ್ಕೆ ವಿಶೇಷ ಮಹತ್ವ ನೀಡಿದ್ದಳು. ಹಸಿದವರಿಗೆ ಅನ್ನನೀಡುವುದು ಮತ್ತು ಅಜ್ಞಾನಿಗಳಿಗೆ ಜ್ಞಾನವನ್ನು ಸಮಾಜಕ್ಕೆ ಹಂಚುವುದು ಎರಡನ್ನೂ ಸಮಾನವಾಗಿ ಪುಣ್ಯದ ಕಾರ್ಯವೆಂದು ಪರಿಗಣಿಸಿದಳು.

ದೇವಾಲಯಗಳು ಮತ್ತು ಮಠಗಳಲ್ಲಿ ಅನ್ನದಾಸೋಹದ ವ್ಯವಸ್ಥೆ ಮಾಡಿಸುವುದರ ಜೊತೆಗೆ, ಪಂಡಿತರು, ಶರಣರು ಹಾಗೂ ವಿದ್ಯಾರ್ಥಿಗಳಿಗೆ ಅಗತ್ಯವಾದ ಸಹಾಯವನ್ನು ನೀಡುತ್ತಿದ್ದಳು. ಇದರ ಮೂಲಕ ಸಮಾಜದಲ್ಲಿ ಜ್ಞಾನ ಮತ್ತು ಮಾನವೀಯ ಮೌಲ್ಯಗಳ ಪ್ರಸಾರಕ್ಕೆ ಅವಳು ಉತ್ತೇಜನ ನೀಡಿದಳು. ಮಧ್ಯಕಾಲೀನ ಕಾಲದಲ್ಲಿ ದೂರದ ಪ್ರಯಾಣಗಳು ಕಷ್ಟಕರವಾಗಿದ್ದರಿಂದ ದಾರಿಹೋಕರಿಗೆ ಶುದ್ಧ ಕುಡಿಯುವ ನೀರು ಮತ್ತು ವಿಶ್ರಾಂತಿಯ ಸೌಲಭ್ಯಗಳು ಅತ್ಯಂತ ಅಗತ್ಯವಾಗಿದ್ದವು. ಲಕುಮಾದೇವಿಯು ಈ ಅಗತ್ಯವನ್ನು ಮನಗಂಡು ವಿವಿಧ ಪ್ರದೇಶಗಳಲ್ಲಿ ಅರವಟ್ಟಿಗೆಗಳು ಮತ್ತು ನೀರಿನ ವ್ಯವಸ್ಥೆಗಳನ್ನು ನಿರ್ಮಿಸಿದಳು. ಇದು ಅವಳ ಮಾನವೀಯ ಕಾಳಜಿ ಮತ್ತು ಜನಪರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಇದಲ್ಲದೆ, ಅವಳು ಧರ್ಮಶಾಲೆಗಳ ನಿರ್ಮಾಣಕ್ಕೂ ಉತ್ತೇಜನ ನೀಡಿದ್ದಳು. ಯಾತ್ರಿಕರು, ಸಾಧು–ಸಂತರು ಹಾಗೂ ದೂರದ ಪ್ರದೇಶಗಳಿಂದ ಬಂದ ಭಕ್ತರು ವಿಶ್ರಾಂತಿ ಪಡೆಯಲು ಧರ್ಮಶಾಲೆಗಳನ್ನು ನಿರ್ಮಿಸಿ, ಅವುಗಳ ನಿರ್ವಹಣೆಗೆ ದತ್ತಿಗಳನ್ನು ಒದಗಿಸಿದಳು. ಧರ್ಮಶಾಲೆಗಳು ಕೇವಲ ವಸತಿಗೃಹಗಳಾಗಿರದೆ, ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂವಾದದ ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಿದ್ದವು. ಅವಳ ಆಡಳಿತದಲ್ಲಿ ಸಮಾಜದ ದುರ್ಬಲ ವರ್ಗಗಳ ಕಲ್ಯಾಣಕ್ಕೂ ಸಮಾನ

ಪ್ರಾಮುಖ್ಯತೆ ನೀಡಲಾಗುತ್ತಿತ್ತು. ಈ ಎಲ್ಲಾ ಜನೋಪಕಾರಿ ಕಾರ್ಯಗಳ ಫಲವಾಗಿ ಲಕುಮಾದೇವಿಯು ಪ್ರಜೆಗಳ ಅಪಾರ ಪ್ರೀತಿ ಮತ್ತು ಗೌರವಕ್ಕೆ ಪಾತ್ರಳಾದಳು. ಅವಳ ಉದಾರತೆ ಮತ್ತು ದಾನಶೀಲತೆಯನ್ನು ಕೊಂಡಾಡುವ ಡೋಣಿ ಶಾಸನ ಅವಳನ್ನು "ಮಹಾದಾನ ವಿನೋದೆ" ಹಾಗೂ "ದಾನಚಿಂತಾಮಣಿ" ಎಂಬ ಗೌರವಪೂರ್ಣ ಬಿರುದುಗಳಿಂದ ಸ್ಮರಿಸಿದೆ. ಈ ಬಿರುದುಗಳು ಅವಳು ಕೇವಲ ದಾನ ಮಾಡುವ ಮಹಾರಾಣಿಯಾಗಿರದೆ, ದಾನವನ್ನು ಜೀವನದ ಆದರ್ಶವನ್ನಾಗಿ ಮಾಡಿಕೊಂಡಿದ್ದಳು ಎಂಬುದನ್ನು ಸ್ಪಷ್ಟಪಡಿಸುತ್ತವೆ.

**ಲಕುಮಾದೇವಿಯ ಮಹಿಳಾ ನಾಯಕತ್ವದ ಆದರ್ಶ:** ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಮಹಿಳೆಯರಿಗೆ ರಾಜಕೀಯ ಮತ್ತು ಆಡಳಿತ ಕ್ಷೇತ್ರಗಳಲ್ಲಿ ಹೆಚ್ಚಿನ ಅವಕಾಶಗಳಿರಲಿಲ್ಲ ಎಂಬ ಸಾಮಾನ್ಯ ಅಭಿಪ್ರಾಯವಿದೆ. ಆದರೆ ಕರ್ನಾಟಕದ ಇತಿಹಾಸವು ಈ ಅಭಿಪ್ರಾಯವನ್ನು ಸಂಪೂರ್ಣವಾಗಿ ತಳ್ಳಿಹಾಕುತ್ತದೆ. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ರಾಣಿ ಲಕುಮಾದೇವಿಯ ಜೀವನವು ಮಹಿಳೆಯರು ಸಮರ್ಥ ಆಡಳಿತಗಾರ್ತಿಯರು, ರಾಜಕೀಯ ನಾಯಕಿಯರು ಮತ್ತು ಸಮಾಜಮುಖಿ ಚಿಂತಕರಾಗಿಯೂ ಕಾರ್ಯನಿರ್ವಹಿಸಬಲ್ಲರು ಎಂಬುದಕ್ಕೆ ಅತ್ಯುತ್ತಮ ಐತಿಹಾಸಿಕ ಸಾಕ್ಷಿಯಾಗಿದೆ. ಲಕುಮಾದೇವಿಯು ತನ್ನ ಜೀವನದಲ್ಲಿ ಅನೇಕ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಳು. ಅವಳು ಒಬ್ಬ ಸಮರ್ಥ ಆಡಳಿತಗಾರ್ತಿಯಾಗಿ ವಿವಿಧ ಪ್ರಾಂತ್ಯಗಳ ಆಡಳಿತವನ್ನು ದಕ್ಷತೆಯಿಂದ ನಿರ್ವಹಿಸಿದಳು.

ಒಬ್ಬ ಧಾರ್ಮಿಕ ನಾಯಕಿಯಾಗಿ ಶಿವಭಕ್ತಿ, ಶರಣಸೇವೆ ಹಾಗೂ ಧಾರ್ಮಿಕ ಸಂಸ್ಥೆಗಳ ಪೋಷಣೆಗೆ ತನ್ನನ್ನು ಸಮರ್ಪಿಸಿಕೊಂಡಳು. ಸಮಾಜಸೇವಕಿಯಾಗಿ ಅನ್ನದಾಸೋಹ, ಜ್ಞಾನದಾಸೋಹ, ಅರವಟ್ಟಿಗೆಗಳ ನಿರ್ಮಾಣ, ಧರ್ಮಶಾಲೆಗಳ ಸ್ಥಾಪನೆ ಮತ್ತು ಬಡವರ ನೆರವಿನಂತಹ ಅನೇಕ ಕಾರ್ಯಗಳನ್ನು ಕೈಗೊಂಡಳು. ದಾನಶೀಲ ಮಹಾರಾಣಿಯಾಗಿ ಭೂದಾನಗಳು ಮತ್ತು ದತ್ತಿಗಳ ಮೂಲಕ ಸಮಾಜದ ಅಭಿವೃದ್ಧಿಗೆ ನೆರವಾದಳು. ಶರಣರ ಆಶ್ರಯದಾತೆಯಾಗಿ ವೀರಶೈವ ಶರಣರಿಗೆ ಗೌರವ, ರಕ್ಷಣೆ ಮತ್ತು ಆರ್ಥಿಕ ಸಹಾಯವನ್ನು ಒದಗಿಸಿದಳು. ಜೊತೆಗೆ ರಾಜಕೀಯ ಸಲಹೆಗಾರ್ತಿಯಾಗಿ ವಿಕ್ರಮಾದಿತ್ಯನ ಆಡಳಿತದಲ್ಲಿ ವಿವೇಕಯುತ ಸಲಹೆಗಳನ್ನು ನೀಡಿ, ರಾಜ್ಯದಲ್ಲಿ ಶಾಂತಿ ಮತ್ತು ಸುಶಾಸನವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರವಹಿಸಿದಳು. ಅವಳ ಜೀವನವು ಮಹಿಳೆಯ ನಾಯಕತ್ವವು ಕೇವಲ ಕುಟುಂಬ ಅಥವಾ ಅಂತಃಪುರಕ್ಕೆ ಸೀಮಿತವಾಗಿರದೆ, ರಾಜಕೀಯ, ಆಡಳಿತ, ಧರ್ಮ ಮತ್ತು ಸಮಾಜಸೇವೆಯಂತಹ ವಿಶಾಲ ಕ್ಷೇತ್ರಗಳಿಗೂ ವಿಸ್ತರಿಸಬಹುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಮಧ್ಯಕಾಲೀನ ಕರ್ನಾಟಕದಲ್ಲಿ ಮಹಿಳೆಯ ಸಾಮರ್ಥ್ಯ, ನಾಯಕತ್ವ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ಪ್ರತಿಬಿಂಬಿಸುವ ಆದರ್ಶ ವ್ಯಕ್ತಿತ್ವವಾಗಿ ಲಕುಮಾದೇವಿಯು ಇತಿಹಾಸದಲ್ಲಿ ಅಜರಾಮರ ಸ್ಥಾನವನ್ನು ಪಡೆದಿದ್ದಾಳೆ.

**ಉಪಸಂಹಾರ:** ಲಕುಮಾದೇವಿಯು ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದ ಇತಿಹಾಸದಲ್ಲಿ ವಿಶಿಷ್ಟ ಮತ್ತು ಅಜರಾಮರ ಸ್ಥಾನವನ್ನು ಅಲಂಕರಿಸಿದ್ದಾಳೆ. ಅವಳು ಕೇವಲ ಆರನೆಯ ವಿಕ್ರಮಾದಿತ್ಯನ ಮಹಾರಾಣಿಯಾಗಿರದೆ, ಸಮರ್ಥ ಆಡಳಿತಗಾರ್ತಿ, ಶಿವಭಕ್ತೆ, ವೀರಶೈವ ಧರ್ಮದ ಪೋಷಕಿ, ಶರಣರ ಆಶ್ರಯದಾತೆ, ದಾನಶೀಲ ಮಹಾರಾಣಿ ಹಾಗೂ ಜನಪರ ನಾಯಕಿಯಾಗಿ ಕರ್ನಾಟಕದ ಇತಿಹಾಸದಲ್ಲಿ ಅಳಿಯದ ಹೆಜ್ಜೆಗುರುತನ್ನು ಮೂಡಿಸಿದ್ದಾಳೆ. ಅವಳ ಆಡಳಿತದಲ್ಲಿ ಜನಹಿತ, ನ್ಯಾಯ, ಧಾರ್ಮಿಕ ಸಹಿಷ್ಣುತೆ ಮತ್ತು ಸಾಮಾಜಿಕ ಕಲ್ಯಾಣಕ್ಕೆ ವಿಶೇಷ ಆದ್ಯತೆ ದೊರೆಯಿತು. ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರ, ಭೂದಾನ, ಅನ್ನದಾಸೋಹ, ಜ್ಞಾನದಾಸೋಹ, ಅರವಟ್ಟಿಗೆಗಳ ನಿರ್ಮಾಣ, ಧರ್ಮಶಾಲೆಗಳ ಸ್ಥಾಪನೆ ಮತ್ತು ಬಡವರ ನೆರವಿನಂತಹ ಜನೋಪಕಾರಿ ಕಾರ್ಯಗಳು ಅವಳ ಸಮಾಜಮುಖಿ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ. ಶಿವಭಕ್ತಿಯನ್ನು ವೈಯಕ್ತಿಕ ಆರಾಧನೆಗೆ ಸೀಮಿತಗೊಳಿಸದೆ, ಸಮಾಜಸೇವೆ ಮತ್ತು ಮಾನವೀಯ ಮೌಲ್ಯಗಳೊಂದಿಗೆ ಸಮನ್ವಯಗೊಳಿಸಿದ ಅವಳ ಜೀವನವು ಧರ್ಮ ಮತ್ತು ಆಡಳಿತದ ಸಾರ್ಥಕ ಸಂಯೋಜನೆಯಾಗಿದೆ. ಶರಣರ ಮೇಲಿನ ಅವಳ ಗೌರವ, ಧಾರ್ಮಿಕ ಸಂಸ್ಥೆಗಳ ಪೋಷಣೆ ಹಾಗೂ ರಾಜಕೀಯ ದೂರದೃಷ್ಟಿ ಮಧ್ಯಕಾಲೀನ ಕರ್ನಾಟಕದಲ್ಲಿ ಮಹಿಳೆಯರು ವಹಿಸಿದ್ದ ಸೃಜನಾತ್ಮಕ ಮತ್ತು ಪ್ರಭಾವಶಾಲಿ ಪಾತ್ರವನ್ನು ಸ್ಪಷ್ಟಪಡಿಸುತ್ತವೆ. ಲಕುಮಾದೇವಿಯ ಜೀವನವು ಮಹಿಳೆಯರು ರಾಜಕೀಯ, ಆಡಳಿತ, ಧರ್ಮ ಹಾಗೂ ಸಮಾಜಸೇವೆಯ ಕ್ಷೇತ್ರಗಳಲ್ಲಿ ಸಮರ್ಥ ನಾಯಕತ್ವ ನೀಡಬಲ್ಲರು ಎಂಬುದಕ್ಕೆ ದೃಢವಾದ ಐತಿಹಾಸಿಕ ಸಾಕ್ಷಿಯಾಗಿದೆ.

**ಗ್ರಂಥಸೂಚಿ**


- ಎಂ.ಎಂ.ಕಲಬುರ್ಗಿ, ಬಸವಣ್ಣ ಮತ್ತು ಶರಣ ಸಾಹಿತ್ಯ. ಕನ್ನಡ ವಿಶ್ವವಿದ್ಯಾಲಯ, ಹಂಪಿ, 2002.
- ಆರ್.ಸಿ.ಹಿರೇಮಠ, ವೀರಶೈವ ಧರ್ಮದ ಇತಿಹಾಸ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 1985.
- ಜಿ.ಎಸ್.ದೀಕ್ಷಿತ್, ಕರ್ನಾಟಕದ ರಾಜವಂಶಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1998.
- ಎಸ್.ಆರ್.ಶರ್ಮಾ, ಭಾರತದ ಮಧ್ಯಕಾಲೀನ ಇತಿಹಾಸ, ಮೋತಿಲಾಲ್ ಬನಾರಸಿದಾಸ್, 2001.
- ಎಂ.ಎಸ್.ಕೃಷ್ಣಮೂರ್ತಿ, ಕಲ್ಯಾಣ ಚಾಲುಕ್ಯರ ಆಡಳಿತ ವ್ಯವಸ್ಥೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1995.
- ಬಿ.ಆರ್.ಗೋಪಾಲ್, ಕರ್ನಾಟಕದ ಶಾಸನಗಳು ಮತ್ತು ಇತಿಹಾಸ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008.

- ಎಂ.ಚಿದಾನಂದಮೂರ್ತಿ, ಕರ್ನಾಟಕ ಇತಿಹಾಸ ದರ್ಶನ, ಸಪ್ನ ಬುಕ್ ಹೌಸ್, ಬೆಂಗಳೂರು, 2004.
- ಬಿ.ಆರ್.ಗೋಪಾಲ್, ಶಾಸನಗಳಲ್ಲಿ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005.
- Fleet.J.F, *Dynasties of the Kanarese Districts of the Bombay Presidency*, Government Central Press, 1896
- Yazdani.G, *The Early History of the Deccan*, Oxford University Press, 1960
- Moraes, George.M, *The Kadamba Kula: A History of Ancient and Mediaeval Karnataka*. Asian Educational Services, 1990
- Kamath U.Suryanath, *A Concise History of Karnataka*, Jupiter Books, 2001
- Shettar.S, *Hampi: A Medieval Metropolis*, Directorate of Archaeology and Museums, 2003